

ಹಲವು ಕಾರಣಗಳಿಂದ ಮೊಣಕಾಲು ನೋವಿನ ಸಮಸ್ಯೆ ಇತ್ತೀಚೆಗೆ ಹೆಚ್ಚುತ್ತಿದೆ. ವಿಪರೀತ ನೋವು ಉಂಟಾದರೆ ಶಸ್ತ್ರಚಿಕಿತ್ಸೆಯೊಂದೇ ದಾರಿಯಾಗುತ್ತದೆ. ಇದೀಗ ಮೊಣಕಾಲಿಗೆ ಅತ್ಯಾಧುನಿಕವಾದ ಕೀಹೋಲ್ ಸರ್ಜರಿ ಸೌಲಭ್ಯ ಲಭ್ಯವಿದ್ದು, ರೋಗಿಗೆ ಸಣ್ಣ ಗಾಯ, ಕಡಿಮೆ ಆಸ್ಪತ್ರೆ ವಾಸ, ಬೇಗನೆ ಗುಣಮುಖನಾಗುವಂಥ ವೈದ್ಯಕೀಯ ವ್ಯವಸ್ಥೆಯಿದು.

■ ಉಮಾ ಅನಂತ್

# ಮೊಣಕಾಲಿಗೆ ಕೀಹೋಲ್ ಸರ್ಜರಿ

ತುಮಕೂರಿನ ಗಂಗಾ ಶಿವಕುಮಾರ್‌ಗೆ ವಯಸ್ಸು 57. ವಿಪರೀತ ಮೊಣಕಾಲಿನ ನೋವಿನ ಸಮಸ್ಯೆಯಿಂದ ಬಳಲುತ್ತಿದ್ದ ಗಂಗಾಗೆ ಕಾಲನ್ನು ನೆಲದ ಮೇಲೆ ಊರಲೂ ಆಗದಷ್ಟು ಅಸಾಧ್ಯ ಸಂಕಟ. ಇದರಿಂದ ನಿದ್ದೆಯೂ ದೂರವಾಗಿತ್ತು. ದೈಹಿಕ ಮಾನಸಿಕ ಯಾತನೆಯಿಂದಾಗಿ ಊಟ ತಿಂಡಿಯೂ ಬೇಡವಾಯಿತು. ಬೆಂಗಳೂರಿನ ಮಲ್ಲೇಶ್ವರಂನಲ್ಲಿ ವೈದ್ಯರಿಗೆ ತೋರಿಸಿದಾಗ ನೋವು ನಿವಾರಕ ಗುಳಿಗೆ, ಇಂಜೆಕ್ಷನ್ ಕೊಟ್ಟರು. ಆದರೆ ಇದರಿಂದ ಯಾವುದೇ ಪ್ರಯೋಜನ ಕಾಣಲಿಲ್ಲ. ಸ್ನೇಹಿತರ ಸಹಾಯದಿಂದ ಬೆಂಗಳೂರಿನ ಸರ್ಜಾಪುರ ರಸ್ತೆಯಲ್ಲಿರುವ ಸಕ್ರಾ ಆಸ್ಪತ್ರೆಯಲ್ಲಿ ತೋರಿಸಿದರು. ಅಲ್ಲಿ ಎಂಆರ್‌ಐ ಸ್ಕ್ಯಾನ್ ಮಾಡಿಸಿದಾಗ ಮೊಣಕಾಲಿನ ಎಲ್‌ಸಿಎಲ್ (ಲ್ಯಾಟರಲ್ ಕೊಲ್ಯಾಟರಲ್ ಲಿಗಾಮೆಂಟ್) ನಲ್ಲಿ ಕ್ಯಾಲ್ಸಿಫಿಕೇಶನ್ ಆಗಿರುವುದೇ ಇಷ್ಟು ನೋವು




ಡಾ. ಚಂದ್ರಶೇಖರ್